best of the best Advocates available in the country is Mr. Nariman. ಅವರಿಗೆ ಈ ಕೇಸ್‌ನ್ನು ನಡೆಸಿ ಎಂದು ನಾವು ಹೇಳಿದ್ದೇವೆ. Already the Advocate General is seized of the matter. ನಾವು ಏನೇನು ಹೇಳಬೇಕು ಅದನ್ನು ಹೇಳುವುದಕ್ಕೆ ಸಿದ್ಧರಾಗಿದ್ದೇವೆ. ಮಾನ್ಯ ಸಿಂಧ್ಯಾರವರು ಏನು ಸಲಹೆ ಮಾಡಿದರು, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ, ಎಂದು ಹೇಳಿ; ನಮ್ಮ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲ, ಆದರೆ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಿ ಈ ಒಂದು ವಾರದಲ್ಲಿ ಸಭೆಯನ್ನು ಕರೆಯಬೇಕೆಂದು ಹೇಳಿ ಮುಖ್ಯಮಂತ್ರಿಗಳ ಸಲಹೆ ಮಾಡಿದರು. ಈ ಒಂದು ಅಧಿವೇಶನ ಮುಗಿಯುವುದರೊಳಗಾಗಿ ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರುಗಳನ್ನು ಸಭೆಗೆ ಕರೆಯಬೇಕೆಂದು ಸಲಹೆ ಮಾಡಿದ್ದಾರೆ. ಸಮಯದ ಅಭಾವದಿಂದ ಕಾಲಕ್ಕೆ ಹೊಂದಿಕೊಂಡಿಲ್ಲ ಹೊರತು, ನಾವು ಸಭೆ ಕರೆಯುತ್ತೇವೆ; ಅವರು ಬಹಳ ಹಿಂದೆಯೇ ಸಲಹೆಯನ್ನು ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಆ ಸ್ಪೇಜ್ ಕೂಡ ಈಗ ಕ್ರಾಸ್ ಆಗಿದೆ. What does 'the Advocate General is seized of the matter" mean? Advocate General is to advise the Government on the legal matter. ಅಲ್ಟಿಮೇಟರಿ ಡಿಸಿಷನ್ ತೆಗೆದುಕೊಳ್ಳುವವರು ಸರ್ಕಾರದವರು. ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಕ್ಯಾಬಿನೆಟ್; ನಿಮ್ಮ ಡಿಸಿಷನ್ ಏನು? ಅಡ್ವೊಕೇಟ್ ಜನರಲ್ ಡೈರೆಕ್ಷನ್ ಏನು? ನಮ್ಮ ಪರವಾಗಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುತ್ತಿದ್ದಾರೆ, ತಮಿಳುನಾಡಿನವರು ಎತ್ತಿರತಕ್ಕಂಥ ಪಾಯಿಂಟ್ಸ್‌ಗಳ ಬಗ್ಗೆ ತಾವು ಏನು ಹೇಳಿದ್ದೀರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ತಮ್ಮನ್ನು ಕರೆದು ಚರ್ಚೆ ಮಾಡಿ ಒಂದು ನಿರ್ಣಯಕ್ಕೆ ಬರಬೇಕು ಎನ್ನುವ ಒಂದು ಸದಿಚ್ಛೆಯಿಂದ ಮಾನ್ಯ ಮುಖ್ಯಮಂತ್ರಿಗಳು ಕಳೆದ 4-5 ದಿವಸಗಳ ಹಿಂದೆಯೇ ನಮಗೆ ಸಲಹೆಯನ್ನು ಮಾಡಿದರು, ಒಂದು ಮೀಟಿಂಗ್ ಕರೆಯೋಣ, ಮುಂದಿನ ವಾರದಲ್ಲಿ ಆ ಮೀಟಿಂಗ್‌ನ್ನು ಕರೆದು ಎಲ್ಲರ ಜೊತೆಯಲ್ಲಿಯೇ ನಿರ್ಣಯ ತೆಗೆದುಕೊಳ್ಳುತ್ತೇವೆಂದು ತಮಗೆ ಹೇಳುತ್ತಿದ್ದೇನೆ.

ಶ್ರೀ ವೈ. ಕೆ. ರಾಮಯ್ಯ: ಒಂದು ಮೀಟಿಂಗ್ ಕರೆದು ಚರ್ಚೆ ಮಾಡಬೇಕೆಂದು ನಾವೂ ಕೂಡ ಪ್ರಾರ್ಥನೆ ಮಾಡುತ್ತೇವೆ.

## ಮಂಡ್ಯದಲ್ಲಿ ಎ.ಪಿ.ಎಂ.ಸಿ. ರೈತರಿಗೆ ವಾಪಸ್ಸು ನೀಡುವ ಬಗ್ಗೆ

59(427) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯ ಚಟುವಟಿಕೆಗಳಿಗಾಗಿ ಹಾಗೂ ಪ್ರಾಂಗಣದ ಅಭಿವೃದ್ಧಿ ಮತ್ತು ವಿಸ್ತರಣೆಗಾಗಿ ಅಕ್ಕಪಕ್ಕದ ಜಮೀನುಗಳನ್ನು ರೈತರಿಂದ ಕಂಡುಕೊಳ್ಳಲು ಮಾರುಕಟ್ಟೆ ಸಮಿತಿ ಮತ್ತು ರೈತರ ಒಡಂಬಡಿಕೆ ಆಗಿರುತ್ತದೆಯೇ?

ಆ) ಹಾಗಿದ್ದಲ್ಲಿ, ಇದರ ವಿವರಗಳೇನು ?

ಇ) ರೈತರಿಂದ ನೋಂದಣಿ ಮಾಡಿಸಿಕೊಳ್ಳಲು ತಡವಾಗಿರುವುದಕ್ಕೆ ಕಾರಣಗಳೇನು?

ಈ) ರೈತರಿಂದ ಈ ಜಮೀನನನ್ನು ಎ.ಪಿ.ಎಂ.ಸಿ.ಯು ತೆಗೆದುಕೊಳ್ಳುವ ವಿಚಾರದಲ್ಲಿ ರೈತರು ಸರ್ಕಾರಕ್ಕೆ ಮನವಿಯನ್ನೇನಾದರೂ ಸಲ್ಲಿಸಿದ್ದಾರೆಯೇ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವ ಉತ್ತರದಲ್ಲಿ ಸತ್ಯಕ್ಕೆ ದೂರವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ರೈತರ ಮತ್ತು ಮಾರುಕಟ್ಟೆಯ ಸಂಸ್ಥೆಯವರ ನಡುವೆ ಆಗಿರತಕ್ಕಂಥ ಸಮಾಲೋಚನೆಯಲ್ಲಿ ಈ ಸರ್ಕಾರದಲ್ಲಿ ಹಿಂದೆ ಮಂತ್ರಿಗಳಾಗಿರತಕ್ಕಂಥವರ ಉಪಸ್ಥಿತಿಯಲ್ಲಿ ಅಂದಿನ ಮಾರುಕಟ್ಟೆ ಸಚಿವರು, ನೀರಾವರಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಈ ಜಮೀನಿನ ಪ್ರಕ್ರಿಯೆ ಸಂಪೂರ್ಣಗೊಂಡಿದ್ದು ಎಪಿಎಂಸಿಯಲ್ಲಿ ಒಂದು ಸ್ಯ್ಟಾಂಪ್ ಪೇಪರ್ ಕೂಡ ತೆಗೆದುಕೊಂಡಿದ್ದು ಹಾಗೂ ಎಲ್ಲ ಪ್ರಕ್ರಿಯೆಗಳೂ ಕೂಡ ಸರ್ಕಾರದ ಅನುಮೋದನೆಯೊಂದಿಗೆ ಪ್ರಾರಂಭ ಆಗಿದೆ. ಕಳೆದ ನಾಲ್ಕು ವರ್ಷಗಳಿಂದ ರೈತರು ಅಲ್ಲಿ ವ್ಯವಸಾಯವನ್ನು ಮಾಡಿರುವುದಿಲ್ಲ. ಎಪಿಎಂಸಿ ಯವರು ಆ ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಳ್ಳದೇ ಇರುವುದರಿಂದ ರೈತರು ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿದ್ದು ಅವರು ಆತಂಕದ ಸ್ಥಿತಿಯಲ್ಲಿದ್ದಾರೆ. ಈ ಒಂದು ಜಮೀನನ್ನು ಎಪಿಎಂಸಿಗೆ ಅವಶ್ಯಕತೆ ಇದೆಯೋ ಇಲ್ಲವೋ ಎನ್ನುವುದನ್ನು ಖಚಿತ ಪಡಿಸಬೇಕು. ಹಾಗೂ ಅವಶ್ಯಕತೆ ಇದ್ದಲ್ಲಿ ರೈತರಿಗೆ ಇದನ್ನು ತುರ್ತಾಗಿ ಹಿಂದಕ್ಕೆ ಬಿಟ್ಟು ಕೊಡಬೇಕು ಎಂದು ಆಗಿರುವ ಆದೇಶದ ಬಗ್ಗೆ ಸರ್ಕಾರದ ಖಚಿತವಾದ ಒಂದು ನಿಲುವನ್ನು ವ್ಯಕ್ತಪಡಿಸಬೇಕೆಂದು ನಾನು ಅಗ್ರಹಪೂರ್ವಕವಾಗಿ ತಮ್ಮಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ಸನ್ಮಾನ್ಯ ಅಧ್ಯಕ್ಷರೆ, ಮಂಡ್ಯದಲ್ಲಿರತಕ್ಕಂತಹ 25 ಎಕರೆ 20 ಗುಂಟೆ ಜಮೀನಿನ ಸ್ವಾಧೀನದ ಬಗ್ಗೆ 1998ರಿಂದ ಬೇರೆ ಬೇರೆ ಹಂತಗಳಲ್ಲಿ ಅದರ ಕಾರ್ಯಕ್ರಮಗಳು ನಡೆಯುತ್ತಾ ಬಂದಿದೆ. ಕೊನೆಯದಾಗಿ ಜಿಲ್ಲಾಧಿಕಾರಿಗಳು ಅವರು ತುಂಬಬೇಕಾಗಿರತಕ್ಕಂತಹ 50,000 ರೂಪಾಯಿಗಳ ಠೇವಣಿಯನ್ನು ತುಂಬಿರುವುದಲ್ಲವೆಂಬ ಕಾರಣಕ್ಕಾಗಿ ಆ ಒಂದು ಪ್ರಸ್ತಾವನೆಯನ್ನು ನಾವು ರದ್ದು ಮಾಡಿದ್ದೇವೆ. ಆ ಹಿನ್ನೆಲೆಯಲ್ಲಿ ಅದರ ಜೊತೆಗೆ ಅಲ್ಲಿರತಕ್ಕಂತಹ 41 ಜನ ಮಾಲೀಕರಲ್ಲಿ 8 ಜನರು ಕೋರ್ಟಿಗೆ ಹೋಗಿದ್ದರಿಂದ ಆ ಕೋರ್ಟಿನ ನಿರ್ಣಯವನ್ನು ಪಡೆದುಕೊಳ್ಳುವುದು ತಡವಾಗಿದೆ. ಈಗ ಕೋರ್ಟಿನ ನಿರ್ಣಯವು ಬಂದಿದೆ. ಈಗ ನಮಗೆ ಅದು ಅವಶ್ಯಕತೆಯಿಲ್ಲವೆಂದು ಸರ್ಕಾರದ ವರದಿಯಲ್ಲಿ ಬಂದಿರುತ್ತದೆ. ಕಾರಣವೇನೆಂದರೆ, ಈಗಾಗಲೇ ನಮ್ಮಲ್ಲಿ ಇದ್ದಂತಹ 12 ಎಕರೆ ಜಮೀನಿನಲ್ಲಿ ನಾವು 142 ಗೋಡಾನನ್ನು ಕಟ್ಟಿಸಿದ್ದೇವೆ. ಅವುಗಳಲ್ಲಿ ಇನ್ನು 34 ಗೋಡಾನಗಳು ಖಾಲಿ ಇವೆ. ಅದರ

ಜೊತೆಗೆ 22 ಗೋದಾಮುಗಳಲ್ಲಿ ತರಕಾರಿಯನ್ನು ಇರಿಸುವುದಕ್ಕೋಸ್ಕರ ಕಾದಿರಿಸಿದ್ದರೂ ಕೂಡ ಅದರಲ್ಲಿ ಯಾರೂ ಬಂದಿರುವುದಿಲ್ಲ. ಇವೆಲ್ಲವುಗಳ ಹಿನ್ನೆಲೆಯಲ್ಲಿ, ಇದಕ್ಕೂ, ಮೇಲಾಗಿ ಈ ಮಂಡ್ಯ ಮಾರುಕಟ್ಟೆಯನ್ನು ಶ್ರೀರಂಗಪಟ್ಟಣ ಮಾರುಕಟ್ಟೆಯಾಗಿ ಬೇರ್ಪಡಿಸಬೇಕೆನ್ನುವಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದರಿಂದ ಈಗ ಅಧಿಸೂಚನೆಯನ್ನು ಕೂಡ ಪ್ರಿಲಿಮಿನರಿ ನೋಟಿಫಿಕೇಷನ್‌ನ್ನು ಮಾಡಿರುವುದರಿಂದ ಇವೆಲ್ಲವುಗಳ ಹಿನ್ನೆಲೆಯಲ್ಲಿ 25 ಎಕರೆ 28 ಗುಂಟೆ ಜಮೀನನ್ನು ಖರೀದಿ ಮಾಡುವಂತಹ ಅವಶ್ಯಕತೆಯಿಲ್ಲ ಎನ್ನುವಂತಹ ನಿರ್ಣಯ ಸಾರ್ಕರಕ್ಕೆ ಬಂದಿದೆ. ಅವರಿಗೆ ಬಿಟ್ಟುಕೊಡುವಂತಹ ಪ್ರಶ್ನೆಯೇ ಇಲ್ಲ. ಅದನ್ನು ಸರ್ಕಾರದವರು ತೆಗೆದುಕೊಂಡಿಲ್ಲವೆಂದ ಮೇಲೆ ಬಿಟ್ಟುಕೊಡುವಂತಹ ಪ್ರಶ್ನೆಯೇ ಬರುವುದಿಲ್ಲ, ಆ ಜಮೀನಿನ ಮಾಲೀಕರು ಇನ್ನೂ ಮಾಲೀಕರಾಗಿದ್ದಾರೆ. ಅದಕ್ಕಾಗಿ ಅದು ಅವಶ್ಯಕತೆಯಿಲ್ಲವೆಂದು ಸರ್ಕಾರ ತೀರ್ಮಾನವನ್ನು ಮಾಡಿದೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಏಕೆಂದರೆ ಹಣ ಕಟ್ಟದೆ ಇರುವುದರಿಂದ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಡ್ರಾಪ್ ಮಾಡಿರುವಂತಹದ್ದು; ರೈತರ ಮತ್ತು ಮಾರುಕಟ್ಟೆ ಸಮಿತಿಯ ಮುಂದೆ ನೇರವಾದ ಒಂದು ಸಮಾಲೋಚನೆ ಅಥವಾ ಒಡಂಬಡಿಕೆ ಆಗಿರತಕ್ಕಂಥದ್ದು ಖಚಿತವಾಗಿ ಸರ್ಕಾರ ಅದು ನಮಗೆ ಬೇಡವೆನ್ನತಕ್ಕಂಥದ್ದನ್ನು ರೈತರಿಗೆ ಲಿಖಿತ ಮೂಲಕವಾಗಿ ತಾವು ತಿಳಿಸಬೇಕೆಂದು ನಾನು ಈ ಸಮಯದಲ್ಲಿ ಸನ್ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು: ನಾವು ಅದನ್ನು ಖರೀದಿ ಮಾಡಲಿಲ್ಲವೆಂದು ಮೇಲೆ ಅದು ಬೇಡವೆನ್ನುವಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ, ನಾವು ಜಮೀನಿನ ಖರೀದಿಯ ಬಗ್ಗೆ ಸರ್ಕಾರದಲ್ಲಿ ಕೆಲವು ಹಂತದಲ್ಲಿ ಪ್ರಸ್ತಾವನೆ ನಡೆಯುತ್ತಿರುವಂತಹ ಸಂದರ್ಭದಲ್ಲಿ, ನಾವು ಅದನ್ನು ಖರೀದಿಯೇ ಮಾಡಿರುವುದಿಲ್ಲ. ಆ ಖರೀದಿಯ ಸಲುವಾಗಿ 50,000 ರೂಪಾಯಿಗಳ ಠೇವಣಿಯನ್ನು ಇಡಬೇಕೆನ್ನುವಂತಹದ್ದು, ಆ ಕರಾರನ್ನು ಅವರುಗಳು ಉಲ್ಲಂಘಿಸಿದ್ದರಿಂದ ಅದನ್ನು ರದ್ದು ಮಾಡಲಾಗಿದೆ. ಈಗ ಅಲ್ಲಿ ಮಾಲೀಕರುಗಳು ಮಾಲೀಕರಾಗಿಯೇ ಇದ್ದಾರೆ. ಸರ್ಕಾರವು ಅದನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಯಾವ ರೀತಿಯಿಂದಲೂ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರವು ಅವರಿಗೆ ಖಚಿತವಾಗಿ ಉತ್ತರ ಕೊಡುವಂತಹ ಅವಶ್ಯಕತೆ ಬರುವುದಿಲ್ಲ.

## ಬೆಂಗಳೂರು ನಗರದಲ್ಲಿ ಹಳದಿಕಾರ್ಡುಗಳ ವಿತರಣೆ

60(251) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಆಹಾರ, ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಡತನ ರೇಖೆಗಿಂತ ಕೆಳಗೆ ಇರತಕ್ಕ ಕುಟುಂಬಗಳ ಸಮೀಕ್ಷಾ ಕಾರ್ಯ ಪ್ರಾರಂಭವಾಗಿದೆಯೇ

ಆ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಎಷ್ಟು ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ;